# ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ : ಕೇಂದ್ರ ಕಛೇರಿ : ಬೆಂಗಳೂರು

## ಪತ್ರಿಕಾ ಪ್ರಕಟಣೆ

ಕರಾರಸಾ ನಿಗಮದ ಸಾರಿಗೆಗಳ ಕಾರ್ಯಾಚರಣೆಯನ್ನು ದಿನಾಂಕ 19.05.2020 ರಿಂದ ಪುನರಾರಂಭಿಸಲಾಗುತ್ತಿದೆ. ಮೊದಲಿಗೆ ಸುಮಾರು 1500 ಅನುಸೂಚಿಗಳನ್ನು (ಅಂದರೆ ಶೇ.25 ರಷ್ಟು) ಕಾರ್ಯಾಚರಣೆ ಮಾಡಲು ಉದ್ದೇಶಿಸಿದ್ದು, ತದನಂತರ ಹಂತ-ಹಂತವಾಗಿ ಸಾರಿಗೆಗಳ ಸಂಖ್ಯೆಯನ್ನು ಹೆಚ್ಚಿಸಿ ಕಾರ್ಯಾಚರಣೆಗೊಳಿಸಲಾಗುವುದು.

ಸಾರಿಗೆಗಳನ್ನು ಕಾರ್ಯಾಚರಣೆ ಮಾಡುವಾಗ ಈ ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಾಗಿದೆ.

1. ಬಸ್ ಪ್ರಯಾಣ ದರಗಳಲ್ಲಿ ಯಾವುದೇ ಹೆಚ್ಚಳವಿರುವುದಿಲ್ಲ.
2. ಹಗಲು ವೇಳೆಯಲ್ಲಿ ಮಾತ್ರ ಅಂದರೆ, ಬೆಳಗ್ಗೆ 07:00 ಗಂಟೆಯಿಂದ ಸಂಜೆ 07.00 ಗಂಟೆವರೆಗೆ ಸಾರಿಗೆಗಳನ್ನು ಕಾರ್ಯಾಚರಿಸಲಾಗುವುದು. ಅಂದರೆ, ಗಮ್ಯ(Destination) ಸ್ಥಳಗಳನ್ನು ಸಂಜೆ 07.00 ಗಂಟೆಯೊಳಗೆ ತಲುಪುವಂತಿರಬೇಕು.

   ಉದಾಹರಣೆಗಳು:

| ಕ್ರ.ಸಂ | ಮಾರ್ಗ | ಪ್ರಯಾಣದ ಅವಧಿ | ಬೆಂಗಳೂರಿನಿಂದ ಕಡೆಯ ಸಾರಿಗೆ ನಿರ್ಗಮಿಸುವ ಸಮಯ |
|---|---|---|---|
| 1 | ಬೆಂಗಳೂರು-ಮೈಸೂರು | 3 ಗಂಟೆ | ಸಂಜೆ 04.00 ಗಂಟೆ |
| 2 | ಬೆಂಗಳೂರು-ಶಿವಮೊಗ್ಗ | 7 ಗಂಟೆ | ಮಧ್ಯಾಹ್ನ 12.00 ಗಂಟೆ |
| 3 | ಬೆಂಗಳೂರು-ದಾವಣಗೆರೆ | 6 ಗಂಟೆ | ಮಧ್ಯಾಹ್ನ 01.00 ಗಂಟೆ |
| 4 | ಬೆಂಗಳೂರು-ಹಾಸನ | 31/2 ಗಂಟೆ | ಮಧ್ಯಾಹ್ನ 03.30 ಗಂಟೆ |
| 5 | ಬೆಂಗಳೂರು-ಮಂಗಳೂರು | 7 1/2ಗಂಟೆ | ಬೆಳಿಗ್ಗೆ 11.30 ಗಂಟೆ |

3. ಕಂಟೈನ್‌ಮೆಂಟ್ ಝೋನ್‌ಗಳಲ್ಲಿ ಯಾವುದೇ ಬಸ್ಸುಗಳ ಕಾರ್ಯಾಚರಣೆ ಇರುವುದಿಲ್ಲ.
4. ಮುಖಕ್ಕೆ ಮಾಸ್ಕ್ ಧರಿಸಿದ ಪ್ರಯಾಣಿಕರಿಗೆ ಮಾತ್ರ ಬಸ್‌ನಲ್ಲಿ ಪ್ರಯಾಣಿಸಲು ಅವಕಾಶವಿರುತ್ತದೆ. ಪ್ರಯಾಣಿಕರು ಮುಖಕ್ಕೆ ಮಾಸ್ಕ್ ಧರಿಸದಿದ್ದರೆ ಬಸ್ ಒಳಗೆ ಅನುಮತಿಸುವುದಿಲ್ಲ.
5. ಬಸ್ಸು ನಿಲ್ದಾಣ ಹಾಗೂ ಬಸ್ಸುಗಳಲ್ಲಿ ಸಾಮಾಜಿಕ ಅಂತರ ಕಾಯ್ದುಕೊಳ್ಳುವುದು.
6. ಒಂದು ಬಸ್ಸಿನಲ್ಲಿ ಗರಿಷ್ಟ 30 ಜನ ಪ್ರಯಾಣಿಕರು ಮಾತ್ರ ಪ್ರಯಾಣಿಸಲು ಅವಕಾಶವಿರುತ್ತದೆ.
7. ಬಸ್ಸು ನಿಲ್ದಾಣಗಳಲ್ಲಿ ಮಾತ್ರ ಪ್ರಯಾಣಿಕರನ್ನು ಹತ್ತಿಸಿಕೊಳ್ಳಲು ಅವಕಾಶ ಕಲ್ಪಿಸಲಾಗಿದೆ.
8. ರಾಜ್ಯದೊಳಗಿನ ಪ್ರಮುಖ ಸ್ಥಳಗಳಿಗೆ ಮಾತ್ರ ಸಾರಿಗೆ ಕಾರ್ಯಾಚರಣೆ ಮಾಡಲಾಗುವುದು.
9. ಪ್ರಸ್ತುತ, ಅಂತರ-ರಾಜ್ಯ ಸಾರಿಗೆಗಳ ಕಾರ್ಯಾಚರಣೆ ಇರುವುದಿಲ್ಲ.
10. ಪ್ರಸ್ತುತ, ಹವಾನಿಯಂತ್ರಿತ ಬಸ್ಸುಗಳ ಕಾರ್ಯಾಚರಣೆ ಇರುವುದಿಲ್ಲ.
11. ಪ್ರತಿ ಭಾನುವಾರದಂದು ಯಾವುದೇ ಬಸ್ಸುಗಳ ಕಾರ್ಯಾಚರಣೆ ಇರುವುದಿಲ್ಲ.
12. ಬಸ್ಸು ನಿಲ್ದಾಣಗಳಲ್ಲಿ ಕಡ್ಡಾಯವಾಗಿ ಪ್ರಯಾಣಿಕರನ್ನು ಥರ್ಮಲ್ ಸ್ಕ್ಯಾನಿಂಗ್‌ಗೆ ಒಳಪಡಿಸಲಾಗುವುದು.
13. ಮುಂಗಡ ಆಸನಗಳನ್ನು www.ksrtc.in ವೆಬ್‌ಸೈಟ್ ಮುಖಾಂತರ ಕಾಯ್ದಿರಿಸಿಕೊಳ್ಳಬಹುದಾಗಿದೆ.
14. ಸಾರ್ವಜನಿಕ ಪ್ರಯಾಣಿಕರು ಆದಷ್ಟು ಕಡಿಮೆ ಪ್ರಮಾಣದ ಲಗ್ಗೇಜುಗಳನ್ನು ತರುವಂತೆ ಹಾಗೂ ಗುರುತಿನ ಚೀಟಿಯೊಂದಿಗೆ (I D Card) ಪ್ರಯಾಣಿಸುವುದು. ಪ್ರಯಾಣಿಕರ ಸುರಕ್ಷತೆ ದೃಷ್ಟಿಯಿಂದ ಮಾರ್ಗ ಮಧ್ಯದಲ್ಲಿ ಊಟ/ಉಪಹಾರಕ್ಕಾಗಿ ನಿಲುಗಡೆ ಇಲ್ಲದೇ ಇರುವುದರಿಂದ ಕುಡಿಯುವ ನೀರು ಮತ್ತು ಆಹಾರವನ್ನು ಪ್ರಯಾಣಿಕರೇ ತರುವುದು.

ಸಾರ್ವಜನಿಕ ಪ್ರಯಾಣಿಕರು ನಿಗಮದೊಂದಿಗೆ ಮತ್ತು ಸಿಬ್ಬಂದಿಯೊಂದಿಗೆ ಸಹಕರಿಸುವಂತೆ ಕೋರಲಾಗಿದೆ.

ಸಹಿ/-

**ಮುಖ್ಯ ಸಂಚಾರ ವ್ಯವಸ್ಥಾಪಕರು (ಕಾ)**

# KARNATAKA STATE ROAD TRANSPORT CORPORATION

## PRESS NOTE

KSRTC will resume its operations with effect from 19.05.2020. Intially, it is propose to operate 1500 buses (25% services). The number of services will be increase gradually.

Following arrangements are made for bus operations.

1. There will be no increase in passenger bus fares.
2. Buses will be operated during day only i.e from 07.00AM to 07.00PM. i.e buses will have to reach the destination within 07.00PM.

   For example:

| Sl No. | Route | Travelling Time | Last service Departure time from Bengaluru |
|---|---|---|---|
| 1 | Bengaluru-Mysore | 3 hours | 04.00PM |
| 2 | Bengaluru-Shivamogga | 7 hours | 12.00PM |
| 3 | Bengaluru-Davangere | 6 hours | 01.00PM |
| 4 | Bengaluru-Hassan | 31/2 hours | 03.30PM |
| 5 | Bengaluru-Mangaluru | 7 1/2 hours | 11.30AM |

3. Buses will not be operated in Containment zone.
4. Passengers will be allowed to travel with face mask only.
5. Social distancing has to be maintained in Bus stations and also in the buses.
6. Maximum of 30 passengers will be allowed to travel in one bus.
7. Passengers will be allowed to board the bus only at the Bus stations.
8. Buses will be operated to major destinations within Karnataka state only.
9. Presently, Buses will not be operated to any interstate places.
10. Presently, the Corporation will not operate any AC BUSES.
11. Buses will not be operated on Sundays.
12. Passengers will be subjected to thermal screening.
13. The Advance Ticket can be booked at www.ksrtc.in
14. Passengers are requested to carry less luggage and travel with their I D card. Keeping in view the of safety of passengers, buses will not be stopped enroute for refreshments, hence they may carry drinking water and food.

The Passengers are requested to co-operate with the corporation and its staff.

**Sd/-**

**CHIEF TRAFFIC MANAGER (Opn)**